ಹೊನ್ನಾಳಿ ತಾಲ್ಲೂಕು ಬೇಲಿಮಂಲ್ಲೂರಿನಲ್ಲಿರುವ ತೋಟಗಾರಿಕೆ ಫಾರಂ ಅನ್ನು ಅಭಿವೃದ್ಧಿಗೊಳಿಸುವುದು

೫೬೧. ಶ್ರೀ ಡಿ. ಜಿ. ಬಸವನಗೌಡ (ಹೊನ್ನಾಳಿ) .—ಮಾನ್ಯ ತೋಟಗಾರಿಕೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹೊನ್ನಾಳಿ ತಾಲ್ಲೂಕು ಬೇಲಿಮಂಲ್ಲೂರಿನಲ್ಲಿರುವ ತೋಟಗಾರಿಕೆ ಫಾರಂ ಅನ್ನು ವಿಸ್ತರಿಸಿ ಅಭಿವೃದ್ಧಿ ಪಡಿಸಲು ಸರಕಾರದವರು ಯೋಚಿಸಿದ್ದಾರೆಯೆ ?

ಆ) ಹಾಗಿದ್ದಲ್ಲಿ ಫಾರಂಗೆ ಹೊಂದಿಕೊಂಡಿರುವ ೪೦ ಎಕರೆ ಗೋಮಾಳವನ್ನು ಸರಕಾರದವರು ವಶಪಡಿಸಿಕೊಂಡು ಅಭಿವೃದ್ಧಿ ಪಡಿಸಲು ಪ್ರಯತ್ನಿಸಲಾಗುವುದೆ ?

ಶ್ರೀ ಎಂ. ಪಿ. ಪ್ರಕಾಶ್ (ತೋಟಗಾರಿಕೆ ರಾಜ್ಯ ಸಚಿವರು)

ಅ) ಇಲ್ಲ.

ಆ) ಮೇಲ್ಕಂಡ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಹಾಸನಜಿಲ್ಲೆ ಬಿ. ಎಂ. ಶೆಟ್ಟಿ ಪ್ರಥಮ ದರ್ಜೆ ಕಾಲೇಜನ್ನು ಸರಕಾರ ವಹಿಸಿಕೊಳ್ಳುವ ಬಗ್ಗೆ.

೬೩೪. ಶ್ರೀ ಬಿ. ಆರ್. ನೀಲಕಂಠಪ್ಪ (ತರೀಕೆರೆ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹಾಸನ ಜಿಲ್ಲೆ ಕೊಣನೂರಿನ ಬಿ. ಎಂ. ಶೆಟ್ಟಿ ಪ್ರಥಮ ದರ್ಜೆ ಕಾಲೇಜಿನ ಆಡಳಿತ ಮಂಡಳಿಯು ಅಧ್ಯಕ್ಷರು ಆಡಳಿತಾಧಿಕಾರಿ ನೇಮಿಸಲು ಕೋರಿ ಅರ್ಜಿ ಸಲ್ಲಿಸಿರುವುದು ನಿಜವೆ? ಹಾಗಿದ್ದಲ್ಲಿ ಆಡಳಿತಾಧಿಕಾರಿಯನ್ನು ನೇಮಕ ಮಾಡಲಾಗಿದೆಯೇ ?

ಆ) ಆ ಕಾಲೇಜಿನ ವಾರ್ಷಿಕ ಸರ್ವ ಸದಸ್ಯರ ಸಭೆಯನ್ನು ಎಷ್ಟು ವರ್ಷಗಳಿಗೊಂಡಾವರ್ತಿ ಕರೆಯಲಾಗುತ್ತದೆ ?

ಇ) ಈ ಕಾಲೇಜಿನ ಬಗ್ಗೆ ಮೈಸೂರು ವಿಶ್ವ ವಿದ್ಯಾನಿಲಯದ ಅಫಿಲಿಯೇಷನ್ ಸಮಿತಿ ಷರತ್ತುಗಳನ್ನು ಪೂರೈಸಲಾಗಿದೆಯೇ ?

ಶ್ರೀ ಎಂ. ರಘುಪತಿ(ಶಿಕ್ಷಣ ಮಂತ್ರಿಗಳು).—

ಅ) ಹೌದು, ಸದರಿ ಕಾಲೇಜಿಗೆ ಆಡಳಿತಾಧಿಕಾರಿಯನ್ನು ನೇಮಿಸಲು ವಿದ್ಯಾ ಇಲಾಖೆ ಸೂಕ್ತ ಕ್ರಮವನ್ನು ತೆಗೆದು ಕೊಳ್ಳಲಾಗುತ್ತಿದೆ.

ಆ) ಸಾಮಾನ್ಯವಾಗಿ ವರ್ಷಕ್ಕೊಂದಾವರ್ತಿ ವಾರ್ಷಿಕ ಸಭೆಯನ್ನು ಕರೆಯಲಾಗುವುದು.

ಇ) ಈ ವಿಷಯದಲ್ಲಿ ಮೈಸೂರು ವಿಶ್ವ ವಿದ್ಯಾನಿಲಯದಿಂದ ಮಾಹಿತಿಯನ್ನು ಪಡೆದು ಸೂಕ್ತ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ತೀರ್ಥಹಳ್ಳಿ ಕಾಲೇಜನ್ನು ಸರಕಾರ ವಹಿಸಿಕೊಳ್ಳುವುದು.

೬೨೧. ಶ್ರೀ ಪಟಮಕ್ಕಿ ರತ್ನಾಕರ್(ತೀರ್ಥಹಳ್ಳಿ) ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ತೀರ್ಥಹಳ್ಳಿ ತಾಲ್ಲೂಕಿನ ಕಾಲೇಜನ್ನು ಸರಕಾರದವರು ವಹಿಸಿಕೊಳ್ಳುವ ಬಗ್ಗೆ ತುಂಗಾ ವಿದ್ಯಾ ವರ್ಧಕ ಸಂಸ್ಥೆ ಸರಕಾರಕ್ಕೆ ಮನವಿ ಸಲ್ಲಿಸಿದೆಯೇ ?

ಆ) ಸಲ್ಲಿಸಿದ್ದಲ್ಲಿ ಕಾಲೇಜನ್ನು ವಹಿಸಿ ಕೊಳ್ಳಲಾಗುವುದೇ, ಹಾಗಿದ್ದಲ್ಲಿ ಅದನ್ನು ಯಾವಾಗ ವಹಿಸಿಕೊಳ್ಳಲಾಗುವುದು ?